



# ಸೃಷ್ಟಿಯ ಅದ್ಭುತ ತಾಣ

ಅಮೆರಿಕದ ಅರಿಜೋನಾದ ಗ್ರ್ಯಾಂಡ್ ಕ್ಯಾನಿಯನ್ ನಮಗೆ ಗೊತ್ತು. ಆದರೆ, ಇಲ್ಲೇ ಶಿಡ್ಲಘಟ್ಟದ ಜಂಗಮಕೋಟೆ ಬಳಿ ಅಂಥ ಬೆಟ್ಟಗಳ ಸಾಲಿರುವುದು ಗೊತ್ತೇ ಇಲ್ಲ!

■ ಚಿತ್ರ-ಲೇಖನ:
**ಅ.ನಾ.ರಾವ್ ಜಾದವ್**



ಛಾಯಾಗ್ರಹಣದಲ್ಲಿ ಭೂ ದೃಶ್ಯಗಳದು ಒಂದು ಪ್ರಮುಖ ವಿಭಾಗ. ಪ್ರಕೃತಿಯ ಸೊಬಗಿನ ಈ ಚಿತ್ರಗಳು ಪ್ರತಿಯೊಬ್ಬರಿಗೂ ಪ್ರಿಯವಾಗುವಂಥವು. ಚಾರಣಿಗನಾದ ನನ್ನ ಛಾಯಾಗ್ರಹಣದ ಬಹುಭಾಗವನ್ನು ಭೂ ದೃಶ್ಯಾವಳಿಗಳು ಆವರಿಸಿಕೊಂಡಿವೆ. ನಮ್ಮ ಪಶ್ಚಿಮ ಘಟ್ಟಗಳಿಂದ ಹಿಡಿದು ಹಿಮಾಲಯದ ಪರ್ವತಗಳ ವರೆಗೂ ಸುತ್ತಾಡಿದ್ದೇನೆ. ಆಗ ಸೆರೆ ಹಿಡಿದದ್ದೆಲ್ಲವೂ ನೆಲದಿಂದ ಗಗನಕ್ಕೆ ಚಾಚಿನಿಂತ ಬೃಹತ್ ಬೆಟ್ಟಗಳದ್ದೇ.

ಒಮ್ಮೆ ಇದಕ್ಕಿಂತ ತೀರ ಭಿನ್ನವಾದ ಭೂ ದೃಶ್ಯಗಳನ್ನು ಚಿತ್ರಿಸುವ ಅವಕಾಶವಾಯಿತು. ಆಶ್ಚರ್ಯವೆಂದರೆ ಅವು ನೆಲ ಮಟ್ಟಕ್ಕಿಂತ ಕೆಳಗಿರುವ ಕಂದರದಲ್ಲಿ ರೂಪುಗೊಂಡ ಅದ್ಭುತ ಶಿಲ್ಪಗಳ ದೃಶ್ಯಾವಳಿಗಳು.

(8ನೇ ಪುಟ ನೋಡಿ)